ಅಸಲು ದಾವಾ:- 242/2021 ಪಿ.ಡಬ್ಲ್ಯೂ:- 2

ದಿನಾಂಕಃ 18.06.2025 ರಂದು ಸಾಕ್ಷಿಯು ನ್ಯಾಯಾಲಯಕ್ಕೆ ಹಾಜರಾಗಿದ್ದು ಪ್ರಮಾಣ ವಚನ ಭೋಧಿಸಲಾಯಿತು.

ಪಾಟೀ ಸವಾಲು:- ಪ್ರತಿವಾದಿ ಪರ ಶ್ರೀ.ಕೆ.ಎಸ್.ಕೆ.ವಕೀಲರಿಂದ

ಎಲ್ಲಿಯಾ ತನಕ ಓದಿದ್ದೇನೆ ಎಂದರೆ 5 ನೇ ತರಗತಿ. ಪ್ರತಿವಾದಿಗಳು ಈ ದಾವೆಯಲ್ಲಿ ಏನು ತಕರಾರು ಸಲ್ಲಿಸಿದ್ದಾರೆ ಗೊತ್ತಿದ್ದೀಯಾ ಎಂದರೆ ಗೊತ್ತಿಲ್ಲ ಆದರೆ ಒಟ್ಟು ಕುಟುಂಬದ ಜಮೀನುಗಳು ಎಂದು ನುಡಿಯುತ್ತಾರೆ. ವಾದಿಗಳು ಎಷ್ಟು ಎಕರೆ ಜಮೀನಿಗೆ ಸಂಬಂಧಿಸಿದಂತೆ ದಾವೆ ಹಾಕಿರುತ್ತಾರೆ ಎಂದರೆ 6 ಎಕರೆ. ಸದರಿ ಜಮೀನಿನಲ್ಲಿ ಎಷ್ಟು ಎಕರೆ ಪಿತ್ರಾರ್ಜಿತ ಆಸ್ತಿ, ಎಷ್ಟು ಎಕರೆ ಸ್ವಯಾರ್ಜಿತಾ ಆಸ್ತಿ ಗೊತ್ತಿದ್ದೀಯಾ ಎಂದರೆ ಗೊತ್ತಿಲ್ಲ. ದಿಃ 23.12.1972 ರ ಕ್ರಯ ಪತ್ರದ ಬಗ್ಗೆ ಮಾಹಿತಿ ಇದೇಯಾ ಎಂದರೆ ಹೌದು. ಎಷ್ಟು ಎಕರೆ ಜಮೀನಿಗೆ ಸಂಬಂಧಿಸಿದಂತೆ ಕ್ರಯ ಪತ್ರ ಮಾಡಿಕೊಂಡಿರುತ್ತಾರೆ ಎಂದರೆ 3 ಎಕರೆ. ಸದರಿ ಕ್ರಯ ಪತ್ರದ ಸರ್ವೆ ನಂಬರ್ ಗೊತ್ತಿದ್ದೀಯಾ ಎಂದರೆ 46 ಹಾಗೂ 47 ಎಂದು ನುಡಿಯುತ್ತಾರೆ. 1 ನೇ ವಾದಿ ಹಾಗೂ 2 ನೇ ಪ್ರತಿವಾದಿ ಸುಮಾರು 25 ವರ್ಷಗಳಿಂದ ಬೇರೆ ಬೇರೆ ವಾಸ ಇದ್ದಾರೆ ಎಂದರೆ ಸರಿ.

ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶವನ್ನು ಕೋರಿದ್ದು, ಪಾಟೀ ಸವಾಲನ್ನು ಮುಂದೂಡಲಾಯಿತು.

ಮರುವಿಚಾರಣೆ ಇಲ್ಲ.

ಸಾ. ಹೇ. ತೆ. ನ್ಯಾ. ಬೆ. ಮಾಡಿಸಲಾಯಿತು.

ಓ. ಹೇ. ಕೇ. ಸ. ಇದೆ.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಹೊನ್ನಾಳಿ